# ಗಾಲಿ ಕುರ್ಚಿಯಲ್ಲಿ ಸಾಹಸಿ ಕ್ರೀಡಾಪಟು

# ದೀಪಧಾರಿ ದೀಪಾ ಮಲ್ಲಿಕ್



ಯುದ್ಧ ಶಿಬಿರಗಳಲ್ಲಿ ದೀಪ ಹಿಡಿದು ನಡೆದು ಗಾಯಾಳುಗಳ ಶುಶ್ರೂಷೆ ಮಾಡಿದ ಫ್ಲಾರೆನ್ಸ್ ನೈಟಿಂಗೇಲ್ ವಿಶ್ವದ ಪಾಲಿಗೆ ದೀಪಧಾರಿ ಮಹಿಳೆ. ಈ ವಿಶೇಷಣ ಭಾರತದ ದೀಪಾ ಮಲ್ಲಿಕ್ ಅವರಿಗೂ ಸಲ್ಲಬೇಕು. ತಮ್ಮ ಸಾಧನೆಯ ಹಾದಿಯುದ್ದಕ್ಕೂ ಅವರು ಮಾಡಿರುವುದು ದೀಪಧಾರಿಯ ಕೆಲಸವನ್ನೇ. ದೇಹವನ್ನು ಅಂಗವೈಕಲ್ಯ ಆವರಿಸಿಕೊಂಡಾಗ, ತಮ್ಮ ಹೆಸರಿನಲ್ಲಿನ ಚೈತನ್ಯವನ್ನು ಬದುಕಿಗೆ ಅಕ್ಷರಶಃ ಆವಾಹಿಸಿಕೊಂಡರು. ಗಾಲಿಕುರ್ಚಿಯಲ್ಲಿ ಕುಳಿತು ವಿಶ್ವವೇ ನಿಬ್ಬೆರಗಾಗಿ ನೋಡುವ ಸಾಧನೆ ಮಾಡಿದ ದೀಪಾ, ಭಾರತದ ಕ್ರೀಡಾಜಗತ್ತಿನ ಅನನ್ಯ ತಾರೆ. ತಾವು ಮಾತ್ರವಲ್ಲ, ಎಳೆಯ ವಯಸ್ಸಿನಲ್ಲಿ ಅಪಘಾತಕ್ಕೆ ತುತ್ತಾಗಿ ಅರ್ಧ ದೇಹದ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿರುವ ಮಗಳು ದೇವಿಕಾ ಅವರನ್ನು ಕೂಡ ಸಮಾಜಕ್ಕೆ ಮಾದರಿಯಾಗಿ ಬೆಳೆಸಿರುವುದು ದೀಪಾ ಎನ್ನುವ ಮಾತೆಯ ಬಹುದೊಡ್ಡ ಸಾಧನೆ. ‘ಅಥ್ಲೆಟಿಕ್ಸ್ ದಿನ’ (ಮೇ 7) ಮತ್ತು ‘ಅಮ್ಮಂದಿರ ದಿನ’ (ಮೇ 9)ದ ಸಂದರ್ಭದಲ್ಲಿ ತಾಯಿ–ಮಗಳ ಈ ಸ್ಫೂರ್ತಿದಾಯಕ ಕಥನ ಬದುಕಿಗೆ ಹೊಸ ಭರವಸೆಗಳನ್ನು ತುಂಬುವಂತಹದ್ದು.

■ ನೇಮಿಚಂದ್ರ